KACM010005402019

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

**ಸತ್ರ ಮೊಕದ್ದಮೆ ನಂಃ 35/2019 and 143/2019**

| | | |
|---|---|---|
| ಸಾಕ್ಷಿದಾರರ ಹೆಸರು | - ರಶ್ಮಿ | ಪಿಡಬ್ಲೂ-1 |
| ಗಂಡನ ಹೆಸರು | - ಮಂಜುನಾಥ | ಸಿಡಬ್ಲೂ - 1 |
| ವಯಸ್ಸು | - 34 ವರ್ಷ | |
| ಉದ್ಯೋಗ | - ಕಾರ್ಯದರ್ಶಿ ಗ್ರಾಮ ಪಂಚಾಯಿತಿ ಬುಕ್ಕಾಂಬುದಿ , ತರೀಕೆರೆ ತಾ. | |
| ವಾಸ ಸ್ಥಳ | - ಚೆನ್ನಗಿರಿ. | |

ದಿನಾಂಕಃ 15-09-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

(ದಿನಾಂಕಃ 20-07-2021 ರಂದು ಆದ ಆದೇಶದ ಅನ್ವಯ ಎಸ್ ಸಿ ನಂಃ 143/2019 ಇದು ಪ್ರಸ್ತುತ ಪ್ರಕರಣದ Split-up ಪ್ರಕರಣವಾಗಿರುವುದರಿಂದ ಸದರಿ ಪ್ರಕರಣವನ್ನು ಈ ಪ್ರಕರಣದೊಂದಿಗೆ ಸಾಕ್ಷ್ಯದಾಖಲಿಸುವ ನಿಮಿತ್ತ Club ಮಾಡಲಾಗಿರುತ್ತದೆ).

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ **-**

1. ನಾನು ದಿನಾಂಕಃ 29-05-2018 ರಿಂದ ಇಲ್ಲಿಯವರೆಗೂ ಬುಕ್ಕಾಂಬುದಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿನಾಂಕಃ 09-11-2018 ರಂದು ನಾನು ನಮ್ಮ ಕಚೇರಿಯಲ್ಲಿ ಕರ್ತವ್ಯದಲ್ಲಿದ್ದೆನು. ಆ ದಿನ ನಮ್ಮ ಪಂಚಾಯಿತಿಯ ಪಿಡಿಓ ಸುರೇಶ್

ರವರು ಬೆಂಗಳೂರು ನ್ಯಾಯಾಲಯಕ್ಕೆ ಹೋಗಿದ್ದರು. ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ನಾನು ಕಚೇರಿಯಲ್ಲಿದ್ದಾಗ ಒಬ್ಬ ಸಾರ್ವಜನಿಕ ಹಾಗೂ ನಮ್ಮ ಕಚೇರಿಯ ಸಿಬ್ಬಂದಿಯವರು ಬುಕ್ಕಾಂಬುದಿ ಕೆರೆಯಲ್ಲಿ ಒಂದು ಮೃತ ದೇಹ ಸಿಕ್ಕಿದೆ ಎಂದು ತಿಳಿಸಿದರು. ಅದರಂತೆ ನಾನು ನಮ್ಮ ಸಿಬ್ಬಂದಿಗಳಾದ ಸಂತೋಷ್ ಮತ್ತು ಓಂಕಾರ್ ಇವರುಗಳನ್ನು ಕರೆದುಕೊಂಡು ನಾನು ಸದರಿ ಬುಕ್ಕಾಂಬುದಿ ಕೆರೆಯ ಹತ್ತಿರ ಹೋಗಿರುತ್ತೇನೆ. ಸದರಿ ಸ್ಥಳದಲ್ಲಿ ನಮ್ಮ ಪಂಚಾಯಿತಿಯ ಸದಸ್ಯರಾದ ಯತೀಶ್ ಮತ್ತು ತಿಪ್ಪೇಶ್ ರವರೂ ಸಹ ಇದ್ದರು. ಅದರಂತೆ ಸದರಿ ಸ್ಥಳದಕಲ್ಲಿ ಸುಮಾರು ಜನ ಸಾರ್ವಜನಿಕರು ಸೇರಿದ್ದರು. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಸದರಿ ಕೆರೆಯ ದಡದಲ್ಲಿ ಒಂದು ಮೃತ ದೇಹ ಇದ್ದ ಚೀಲವಿತ್ತು. ಸದರಿ ಚೀಲವನ್ನು ಕೆರೆಯಿಂದ ತೆಗೆದು ದಡದ ಮೇಲೆ ಇಟ್ಟಿದ್ದರು. ಸದರಿ ಚೀಲವನ್ನು ತೆಗೆದು ನೋಡಿದಾಗ ಅದರಲ್ಲಿ ಪ್ಲಾಸ್ಟಿಕ್ ಕವರ್ ಸುತ್ತಿದ್ದ ಒಂದು ಮೃತ ದೇಹವಿದ್ದು ಅದಕ್ಕೆ ತಲೆ ಇರಲಿಲ್ಲ. ಸದರಿ ತಲೆ ಇಲ್ಲದ ಮೃತ ದೇಹದ ಮೇಲೆ ಯಾವುದೇ ಬಟ್ಟೆ ಇರಲಿಲ್ಲ. ಸದರಿ ಚೀಲವನ್ನು ನಾನು ನೋಡಿದಾಗ ಅದಕ್ಕೆ ವೈರ್ ನ್ನು ಕಟ್ಟಿ ವೈರ್ ಗೆ ಒಂದು ಮಧ್ಯಮ ಗಾತ್ರದ ಕಲ್ಲನ್ನು ಕಟ್ಟಲಾಗಿತ್ತು ಸದರಿ ತಲೆ ಇಲ್ಲದ ಮೃತ ದೇಹವನ್ನು ನಾನು ನೋಡಿದಾಗ ಮೃತ ದೇಹದ ಎಡಗಡೆಯ ತೋಳಿನ ಮೇಲೆ ಗಾಯವಾಗಿತ್ತು . ಸದರಿ ದೇಹಕ್ಕೆ ತಲೆ ಅಥವಾ ರುಂಡ ಇರಲಿಲ್ಲ. ನಾನು ಸದರಿ ರುಂಡವಿಲ್ಲದ ಮೃತ ದೇಹವನ್ನು ನೋಡಿದಾಗ ಯಾರೋ ಸದರಿ ವ್ಯಕ್ತಿಯನ್ನು ಹೊಡೆದು ಕೊಲೆ ಮಾಡಿ ರುಂಡ ಬೇರ್ಪಡಿಸಿ ಕೆರೆಯಲ್ಲಿ ತಂದು ಹಾಕಿರಬಹುದು ಎಂದು ನನಗೆ ಅನ್ನಿಸಿರುತ್ತದೆ. ಆದ್ದರಿಂದ ನಾನು ಈ ಕುರಿತಂತೆ ಪೊಲೀಸರಿಗೆ ದೂರವಾಣಿ ಕರೆ ಮಾಡಿ ವಿಷಯ ತಿಳಿಸಿದ್ದು , ಅದರಂತೆ ಅವರು ಸ್ಥಳಕ್ಕೆ ಬಂದಿದ್ದು ಆಗ ನಾನು ದೂರನ್ನು ನೀಡಿರುತ್ತೇನೆ. ನಾನು ಆ ಸಮಯದಲ್ಲಿ ಪೊಲೀಸರಿಗೆ ನೀಡಿದ

ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ತಾವು ನೀಡಿದ ದೂರನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

3. ನಂತರ ಅದೇ ದಿನ ಪೊಲೀಸರು ಸಂಜೆ 5.45-6 ಗಂಟೆ ಸಮಯದಲ್ಲಿ ಸದರಿ ರುಂಡವಿಲ್ಲದ ಮೃತ ದೇಹವಿದ್ದ ಸ್ಥಳವನ್ನು ನಾನು ತೋರಿಸಿದ್ದು , ಅದರಂತೆ ಸದರಿ ಸ್ಥಳದಲ್ಲಿ ಪೊಲೀಸರು ನನ್ನ , ಇಮ್ತಿಯಾಜ್ ಮತ್ತು ಹನುಮಂತಪ್ಪ ರವರ ಸಮಕ್ಷಮದಲ್ಲಿ ಮಹಜರ್ ಮಾಡಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ಮಹಜರ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಮತ್ತು ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

4. ನಿಪಿ.2 ಮಹಜರ್ ಕಾಲಕ್ಕೆ ಸ್ಥಳದಲ್ಲಿ ಫೋಟೋ ತೆಗೆದಿರುತ್ತಾರೆ. ಸಾಕ್ಷಿಯು ಒಂದು ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ಸದರಿ ಸ್ಥಳದಲ್ಲಿ ತೆಗೆದಿರುವ ಫೋಟೋ ಎಂದು ಹೇಳುತ್ತಾರೆ. ಸದರಿ ಫೋಟೋವನ್ನು ನಿಪಿ.3 ಎಂದು ಗುರುತಿಸಲಾಯಿತು. ಸದರಿ ನಿಪಿ.3 ಫೋಟೋದಲ್ಲಿ ಕಂಡು ಬರುವ ರುಂಡವಿಲ್ಲದ ಮೃತ ದೇಹವು ಆ ದಿನ ಕೆರೆಯಲ್ಲಿ ಸಿಕ್ಕಿದ್ದು, ಕೆರೆಯಲ್ಲಿ ಸಿಕ್ಕ ಮೃತ ದೇಹವಾಗಿರುತ್ತದೆ. ನಾನು ಆ ದಿನ ಮೃತ ದೇಹವನ್ನು ನೋಡಿದಾಗ ಮೃತ ದೇಹದ ಎಡಗಡೆ ತೋಳಿನ ಮೇಲೆ ಹಚ್ಚೆ ಇದ್ದು , ಈಗ ನೋಡುತ್ತಿರುವ ಒಂದು ಫೋಟೋದಲ್ಲಿ ಸದರಿ ಮೃತ ದೇಹದ ಎಡತೋಳಿನ ಮೇಲೆ ಹಚ್ಚೆ ಇರುವುದು ಕಂಡು ಬರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಫೋಟೋವನ್ನು ನಿಪಿ.4 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಲಾಗಿದ್ದು , ಅದರಲ್ಲಿ ಮೃತ ದೇಹದ ಎಡತೋಳಿನ ಮೇಲೆ

ಇರುವ ಗಾಯವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋವನ್ನು ನಿಪಿ.5 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಇನ್ನೊಂದು ಫೋಟೋವನ್ನು ತೋರಿಸಿದ್ದು, ಅದರಲ್ಲಿಯೂ ಸಹ ಮೃತ ದೇಹ ಇರುವ ಬಗ್ಗೆ ಸಾಕ್ಷಿ ಹೇಳುತ್ತಾರೆ. ಸದರಿ ಫೋಟೋವನ್ನು ನಿಪಿ. 6 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀ ಪಿಇಎಸ್ ವಕೀಲರು – **1** ರಿಂದ **4** ಆರೋಪಿತರ ಪರವಾಗಿ</u>

5. ಬುಕ್ಕಾಂಬುದಿ ಕೆರೆಯಿಂದ ನಮ್ಮ ಕಚೇರಿಗೆ ಸುಮಾರು ಒಂದೂವರೆ ಯಿಂದ ಎರಡು ಕಿ ಮೀ ದೂರ ಆಗುತ್ತದೆ. ನನಗೆ ಸದರಿ ಕೆರೆಯ ದಡದ ಮೇಲೆ ಮೃತ ದೇಹ ಸಿಕ್ಕ ವಿಷಯವು ಸುಮಾರು 3.30 ಗಂಟೆಗೆ ಗೊತ್ತಾಗಿರುತ್ತದೆ. ಸದರಿ ಕೆರೆಯಿಂದ ಅಜ್ಜಂಪುರ ಪೊಲೀಸ್ ಠಾಣೆಗೆ ಸುಮಾರು 10 ರಿಂದ 15 ಕಿ ಮೀ ದೂರ ಇರುತ್ತದೆ. ನಾನು ಸದರಿ ಕೆರೆಯ ಹತ್ತಿರ ಹೋದ ಸಮಯದಲ್ಲಿ ಸಾರ್ವನಿಜಕರು ಮೊಬೈಲ್ ನಲ್ಲಿ ಮಾತನಾಡುತ್ತಿದ್ದರು ಎಂದರೆ ನಾನು ಅದನ್ನೆಲ್ಲಾ ಗಮನಿಸಿರುವುದಿಲ್ಲ. ನಾನು ಹೋದಾಗ ಕೆರೆಯ ದಂಡೆಯ ಮೇಲೆ ಶವವಿದ್ದ ಚೀಲವಿತ್ತು. ಸದರಿ ಸ್ಥಳದಲ್ಲಿ ಊರಿನ ಹಿರಿಯ ಮುಖಂಡರು ಇದ್ದರು ಎಂದರೆ ಸಾಕ್ಷಿಯು ಸ್ಥಳದಲ್ಲಿ ಪಬ್ಲಿಕ್ ಸೇರಿದ್ದರು ಎಂದು ಹೇಳುತ್ತಾರೆ. ಪೊಲೀಸರು ಹೇಳಿದಂತೆ ನಾನು ದೂರಿನಲ್ಲಿ ಬರವಣಿಗೆ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಸ್ಥಳದಲ್ಲಿ ಕಂಡಿದ್ದನ್ನು ದೂರಿನಲ್ಲಿ ಬರವಣಿಗೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿ.1 ದೂರನ್ನು ನಾನು ಪೊಲೀಸರ ಸಮಕ್ಷಮದಲ್ಲಿಯೇ ಬರೆದಿದ್ದೇನೆ ಎಂದರೆ ಸ್ಥಳದಲ್ಲಿ ಪೊಲೀಸರು ಇದ್ದರು ಸಾಕ್ಷಿ ಹೇಳುತ್ತಾರೆ.

6. ನಿಪಿ.1 ದೂರನ್ನು ಯಾರಿಗೆ ಅಡ್ರಸ್ ಮಾಡಬೇಕೆಂದು ಸ್ಥಳದಲ್ಲಿದ್ದ ಪೊಲೀಸರು ನನಗೆ ಹೇಳಿದರು ಎಂದರೆ ಸರಿ. ನಿಪಿ.1 ದೂರನ್ನು ಬರೆದ

ಹಾಳೆಯನ್ನು ಪೊಲೀಸರು ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ.1 ದೂರಿಗೆ ವಕ್ಕಣಿಕೆಯನ್ನು ಪೊಲೀಸರು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.2 ಮಹಜರ್ ನ್ನು ಪೊಲೀಸರಿಗೆ ನಾನು ಹೇಳಿ ಬರೆಸಿರುವುದಿಲ್ಲ. ನಾನು ಮೊದಲಿಗೆ ಅಜ್ಜಂಪುರ ಪೊಲೀಸ್ ಠಾಣೆಯ ಒಬ್ಬ ಪ್ರವೀಣ್ ಎಂಬ ಪೊಲೀಸರಿಗೆ ಫೋನ್ ಮಾಡಿ ತಿಳಿಸಿರುತ್ತೇನೆ. ಅವರ ನಂಬರ್ ನ್ನು ಈಗ ನನಗೆ ಹೇಳಲು ಆಗುವುದಿಲ್ಲ. ನಾನು ನಿಪಿ.1 ದೂರನ್ನು ಸ್ಥಳದಲ್ಲಿ ಪೊಲೀಸರಿಗೆ ನೀಡಿದ್ದು, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಅದೇ ರೀತಿ ಅವರ ಹುದ್ದೆ ಏನು ನನಗೆ ಗೊತ್ತಿಲ್ಲ. ನಾನು ನಿಪಿ.1 ದೂರಿಗೆ ಪೊಲೀಸ್ ಠಾಣೆಯಲ್ಲಿ ರುಜು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ.2 ಮಹಜರ್ ಗೂ ಪೊಲೀಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಮೃತ ದೇಹವನ್ನು ಕೆರೆಯಿಂದ ತೆಗೆದಿದ್ದರು , ನನ್ನ ಮೂಲಕ ನಿಪಿ.1 ದೂರನ್ನು create ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶವ ಇದ್ದ ಸ್ಥಳದ ಸುತ್ತ ಮುತ್ತ ಸುಮಾರು 20 ರಿಂದ 30 ಜನ ಸೇರಿದ್ದರು. ನನಗೆ ಸದರಿ ಶವದ ವಿಷಯವನ್ನು ತಿಳಿಸಿದ ವ್ಯಕ್ತಿಯೂ ಸಹ ಶವವಿದ್ದ ಸ್ಥಳದಲ್ಲಿ ಇದ್ದರು. ನಿಪಿ.3 ರಿಂದ 6 ಫೋಟೋಗಳಲ್ಲಿ ನಾನು ಹೇಳಿದ ಹಾಗೆ ಶವ ಇದ್ದ ಸ್ಥಳದಲ್ಲಿ ಸುಮಾರು 20 ರಿಂದ 30 ಜನರು ಕಾಣಿಸುವುದಿಲ್ಲ ಎಂದರೆ ಸರಿ. ನಿಪಿ.3 ರಿಂದ 6 ಫೋಟೋಗಳಲ್ಲಿ ವೈರ್ ಕಂಡು ಬರುತ್ತಿಲ್ಲ ಎಂದರೆ ಸರಿ. ನಿಪಿ.3 ರಿಂದ 6 ಫೋಟೋಗಳಲ್ಲಿ ಚೀಲ ಮತ್ತು ಕಲ್ಲು ಕಾಣಿಸುತ್ತಿಲ್ಲ ಎಂದರೆ ಸರಿ. ಸದರಿ ರುಂಡವಿಲ್ಲದ ಮೃತ ದೇಹವನ್ನು ನೋಡಿದರೆ ಅದು ಯಾರ ಮೃತ ದೇಹ ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

Sd/-
(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಮಾ.